# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 88/2020 ಪಿ.ಡಬ್ಲ್ಯೂಃ 2

ಸಿಡಬ್ಲೂಃ 4

ಸಾಕ್ಷಿದಾರರ ಹೆಸರು : ಶಿವಾನಂದ ಕೊರಡ್ಡಿ

ತಂದೆಯ ಹೆಸರು : ತಿಮ್ಮಣ್ಣ

ವಯಸ್ಸು : 32 ವರ್ಷ

ಉದ್ಯೋಗ : ಅಬಕಾರಿ ರಕ್ಷಕ, ಕಾರವಾರ ವಲಯ

ವಾಸ್ತವ್ಯ : ಕಾರವಾರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 12-07-2022

## ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ

ನಾನು 2015 ರಿಂದ ಇಲ್ಲಿಯವರೆಗೂ ಕಾರವಾರದಲ್ಲಿ ಅಬಕಾರಿ ರಕ್ಷಕನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 21.06.2019 ರಂದು ನಾನು, ಚಾಸಾ.5 , 6 ಮತ್ತು 7 ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಚಾಸಾ.1 ರವರು ಚಾಸಾ.2 ಮತ್ತು 3 ರವರನ್ನು 12.30 ಕ್ಕೆ ಕಚೇರಿಗೆ ಕರೆಸಿ ನಾವು ಗಸ್ತು ನಡೆಸಬೇಕಾಗಿದೆ , ಯಾವುದಾದರೂ ಅನುಮಾನಾಸ್ಪದ ಘಟನೆ ಕಂಡು ಬಂದಲ್ಲಿ ತಾವು ಪಂಚರಾಗಿ ಸಹಕಾರ ನೀಡಬೇಕೆಂದು ನಮಗೆ ಕೇಳಿಕೊಂಡರು. ಮಧ್ಯಾಹ್ನ 12.40 ಕ್ಕೆ ಕಚೇರಿಯನ್ನು ಬಿಟ್ಟು ಮೈಂಗಿಣಿ ಪ್ರದೇಶದಲ್ಲಿ ಗಸ್ತು ತಿರುಗುತ್ತಿದ್ದೆವು. ಆ ಸಮಯದಲ್ಲಿ ಚಾಸಾ.1 ರವರಿಗೆ ಒಂದು ದ್ವಿಚಕ್ರ ವಾಹನ ಸಂಖ್ಯೆ ಕೆ ಎ 30 ವಿ 3885 ವಾಹನದಲ್ಲಿ ಅಂಗಡಿ ಗ್ರಾಮದಿಂದ ಕೊಠಾರ ಗ್ರಾಮದ ಕಡೆಗೆ ಅಕ್ರಮ ಮದ್ಯ ಸಾಗಾಟ ಮಾಡಲಾಗುತ್ತಿದೆ ಎಂದು ಬಾತ್ಮಿ ಬಂದಿತು. ಕೂಡಲೇ ಕೊಠಾರ ಗ್ರಾಮಕ್ಕೆ ತೆರಳುತ್ತಿರುವಾಗ ಬಾತ್ಮಿಯಲ್ಲಿ ತಿಳಿಸಿದ ವಾಹನ ನಮ್ಮ ಎದುರುಗಡೆ ಬಂದಿತು. ನಮ್ಮ ಇಲಾಖಾ ವಾಹನ ನೋಡಿ ಗದ್ದೆಯೊಳಗಡೆ ಆ ದ್ವಿಚಕ್ರ ವಾಹನ ನುಗ್ಗಿತು. ನಾವು ಕೂಡಲೇ ವಾಹನವನ್ನು ಬೆನ್ನು ಹತ್ತಿ ಸದರಿ ವಾಹನವನ್ನು ಹಿಡಿದು ನಿಲ್ಲಿಸಿದೆವು. ಆ ದ್ವಿಚಕ್ರ ವಾಹನದಲ್ಲಿ ಎರಡು ಪ್ಲಾಸ್ಟಿಕ ಚೀಲಗಳು ಇದ್ದದ್ದು ಕಂಡು ಬಂದವು. ಮೂಟೆಯಲ್ಲಿ ಏನಿದೆ ಎಂದು ಚಾಸಾ.1 ರವರು ಆ ವ್ಯಕ್ತಿ ಕೇಳಿದಾಗ ಅದರಲ್ಲಿ ಗೋವಾ ಫೆನ್ನಿ ಇರುವುದಾಗಿ ಹೇಳಿದನು. ಪಾಸ್ ಮತ್ತು ಪರ್ಮಿಟ ಕೇಳಲಾಗಿ ಇಲ್ಲಾ ಎಂದು ಹೇಳಿದನು. ಹೆಸರು ಮತ್ತು ವಿಳಾಸ ಕೇಳಿದಾಗ ತನ್ನ ಹೆಸರನ್ನು ಪ್ರಹ್ಲಾದ ಅಸ್ನೋಟಿಕರ ಎಂದು ಹೇಳಿದನು. ಸ್ಥಳೀಯರನ್ನು ಪಂಚರಾಗಲು ನೋಡಿದಾಗ ಯಾರೂ ಇಲ್ಲದೇ ಇರುವ ಕಾರಣ ಕರೆದುಕೊಂಡು

ಹೋದ ಚಾಸಾ.2 ಮತ್ತು 3 ರನ್ನು ಪಂಚರಾಗಿ ಮಾಡಿದೆವು. ಮಾನ್ಯ ನ್ಯಾಯಾಲಯದಿಂದ ಶೋಧನಾ ವಾರಂಟ ಪಡೆಯಲು ಸಾಕಷ್ಟು ಸಮಯಾವಕಾಶ ಇಲ್ಲದಿರುವ ಕಾರಣ , ವಿಳಂಬವಾದರೆ ಸಾಕ್ಷ್ಯ ನಾಶವಾಗುವ ಸಂಭವ ಇದ್ದಿದ್ದರಿಂದ ಸ್ಥಳದಲ್ಲೇ ಕ.ಅ.ಕಾಯ್ದೆ ಕಲಂ 54 ರಡಿ ಶೋಧನಾ ವಾರಂಟನ್ನು ಚಾಸಾ.1 ರವರು ತಯಾರಿಸಿ ಮೂಟೆಯನ್ನು ಪರಿಶೀಲಿಸಿದಾಗ ಎರಡೂ ಚೀಲದಲ್ಲಿ 25 ಲೀಟರ ಸಾಮರ್ಥದ ರಬ್ಬರ ಟ್ಯೂಬ ಗಳು ಇರುವುದು ಕಂಡು ಬಂದಿತು. ವಾಹನವನ್ನು ಪರಿಶೀಲಿಸಿದಾಗ ಅದು ಹಿರೋಹೊಂಡಾ ಕಂಪನಿಯ ಗ್ಲಾಮರ ವಾಹನ ಆಗಿತ್ತು. ಅದರ ಸಂಖ್ಯೆ ಕೆ ಎ 30 ವಿ 3885 ಆಗಿತ್ತು.

3. ನಂತರ ರಾಸಾಯನಿಕ ಪರೀಕ್ಷೆಗಾಗಿ ಒಂದು ಟ್ಯೂಬಿನಿಂದ 2 ಲೀಟರ ನಂತೆ ಒಟ್ಟು 4 ಲೀಟರ ಮದ್ಯವನ್ನು ತೆಗೆದು ಬಿಳಿ ಬಟ್ಟೆಯಿಂದ ಸುತ್ತಿ , ದಾರದಿಂದ ಕಟ್ಟಿ , ಅರಗು ಹಾಕಿ ಸೀಲ್ ಮಾಡಲಾಯಿತು. ಸಣ್ಣ ಸಣ್ಣ ಚೀಟಿ ತಯಾರಿಸಿ ಪಂಚರ ಮತ್ತು ಚಾಸಾ.1 ರವರ ಸಹಿಯನ್ನು ಹಾಕಿಸಿ ಬಾಟಲುಗಳ ಮೇಲೆ ಅಂಟಿಸಲಾಯಿತು. ನಂತರ ಆರೋಪಿತನನ್ನು ದಸ್ತಗಿರಿ ಮಾಡಿ ಠಾಣೆಗೆ ಕರೆದುಕೊಂಡು ಬರಲಾಯಿತು. ಸ್ಥಳದಲ್ಲೇ ಪಂಚನಾಮೆಯನ್ನು 1.15 ಗಂಟೆಯಿಂದ 2.15 ಗಂಟೆಯವರೆಗೆ ಬರೆದು ಮುಗಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ಈಗ ನಾನು ನ್ಯಾಯಾಲಯದ ಮುಂದಿರುವ ಮು ಮಾ ಗಳನ್ನು ನೋಡಿ ಗುರುತಿಸುತ್ತೇನೆ.

4. ದಿನಾಂಕಃ 03.08.2019 ರಂದು ರಾಸಾಯನಿಕ ಪರೀಕ್ಷೆಗೋಸ್ಕರ ಮು ಮಾ ಗಳನ್ನು ತೆಗೆದುಕೊಂಡು ಧಾರವಾಡಕ್ಕೆ ಹೋಗಲಾಯಿತು. ದಿನಾಂಕಃ 16.09.2019 ರಂದು ರಾಸಾಯನಿಕ ಪರೀಕ್ಷೆಯ ವರದಿಯನ್ನು ಪಡೆದುಕೊಂಡು ಬಂದು ಚಾಸಾ.1 ರವರಿಗೆ ನೀಡಲಾಯಿತು. ದಿನಾಂಕಃ 02.08.2019 ರಂದು ರಾಸಾಯನಿಕ ಪರೀಕ್ಷಕರ ಪ್ರಯೋಗಾಲಯ ಧಾರವಾಡ ಇವರಿಗೆ ಬರೆದ ಪತ್ರ ನೋಡುತ್ತಿದ್ದು , ಅದನ್ನು ಗುರುತಿಸುತ್ತೇನೆ. ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ದಿನಾಂಕಃ 16.09.2019 ರಂದು ಅವರು ನೀಡಿದ ವರದಿಯನ್ನು ನೋಡುತ್ತಿದ್ದು , ಅದನ್ನು ಗುರುತಿಸುತ್ತೇನೆ. ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ಚಾಸಾ.1 ರವರಿಗೆ ಆರೋಪಿತನಿಗೆ ಹಿಡಿಯುವಲ್ಲಿ ಬೇಕಾದ ಸಹಾಯವನ್ನು ಮಾಡಿರುತ್ತೇನೆ. ಚಾಸಾ.9 ರವರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಪಿ ಜಿ ಪಿ ಆರೋಪಿ ಪರ ವಕೀಲರಿಂದ**

**5.** ಪ್ರಕರಣದ ಫಿರ್ಯಾದಿದಾರರು ನನ್ನ ಮೇಲಾಧಿಕಾರಿಗಳು ಎಂದರೆ ಸರಿ. ಘಟನಾ ಸ್ಥಳಕ್ಕೆ ಹೋಗಿರುವುದರ ಬಗ್ಗೆ ಸ್ಟೇಷನ್ ಡೈರಿಯಲ್ಲಿ ನಮೂದಾಗಿರುವುದರ ಬಗ್ಗೆ ನನಗೆ ಗೊತ್ತಿಲ್ಲಾ. ಮಧ್ಯಾಹ್ನ 12.45 ಗಂಟೆ ಸುಮಾರಿಗೆ ನಾವು ಗಸ್ತು ತಿರುಗುತ್ತಿದ್ದೆವು. ನಮ್ಮ ಇಲಾಖಾ ವಾಹನ ಸಂಖ್ಯೆ ಕೆ ಎ 30 ಜಿ 333 ನೇದರಲ್ಲಿ ಗಸ್ತು ತಿರುಗುತ್ತಿದ್ದೆವು. ಈ ಕುರಿತು ನನ್ನ ಹೇಳಿಕೆಯಲ್ಲಾಗಲೀ , ದೂರನಲ್ಲಾಗಲೀ ನಮೂದಾಗಿಲ್ಲಾ ಎಂದರೆ

ಸರಿ. ಈ ಪ್ರಕರಣದಲ್ಲಿರುವ ಪಂಚರು ಒಬ್ಬರು ಮಕ್ಕೇರಿಯವರು ಮತ್ತು ಇನ್ನೊಬ್ಬರು ಕಿನ್ನರದವರು ಎಂದರೆ ಸರಿ. ಸದರಿ ಸ್ಥಳಗಳು ಘಟನಾ ಸ್ಥಳದಿಂದ ಸುಮಾರು 15 ಕಿಮೀ ದೂರದಲ್ಲಿವೆ. ಘಟನಾ ಸ್ಥಳದಿಂದ ಕೊಠಾರ ಗ್ರಾಮ ಸುಮಾರು 1 ಕಿಮೀ ದೂರದಲ್ಲಿದೆ. ಘಟನಾ ಸ್ಥಳದ ಬಳಿ ಮನೆಗಳಿವೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ವಾಹನ ಸಂಚಾರ ಮತ್ತು ಜನಸಂಚಾರ ಇದೆ ಎಂದರೆ ಸರಿಯಲ್ಲ. ಪಂಚರು ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಪ್ರಕರಣದಲ್ಲಿ ವಶಪಡಿಸಿಕೊಂಡ ಮು ಮಾ ಗಳನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗಿಲ್ಲಾ ಎಂದರೆ ಸರಿಯಲ್ಲ.

6. ನಾವು ಆ ದಿನ ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲಾ ಎಂದರೆ ಸರಿಯಲ್ಲ, ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮು ಮಾ ಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ವಾಹನಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ನಿಲ್ಲಿಸಿದ್ದ ವಾಹನದಲ್ಲಿ ಮು ಮಾ ಗಳನ್ನು ಇಟ್ಟು ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಫಿರ್ಯಾದಿದಾರರು ನನ್ನ ಮೇಲಾಧಿಕಾರಿಗಳಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**